Rotary ರೋಟರಿ **ಐಸಿರಿ** ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ 25ನೇ ಸಂಚಿಕೆ
ದಿನಾಂಕ: 23.12.2025


Rtn. Anil Kumar
President


Rtn. Krishnappa
Secretary

## ಮಾನವೀಯತೆ ಬೆಳೆಸಿಕೊಳ್ಳಿ – ರೋಟರಿ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ

ವೈಜ್ಞಾನಿಕವಾಗಿ ಸಾಕಷ್ಟು ಮುಂದುವರೆದ ನಾವು ಬೇರೆ ಬೇರೆ ಗ್ರಹಗಳಲ್ಲಿ ಅಡಗಿರುವ ರಹಸ್ಯವನ್ನೂ ಸಂಶೋಧಿಸಬಲ್ಲೆವು. ಅಂತೆಯೇ ನಮ್ಮ ಪಕ್ಕದ ಗೃಹದಲ್ಲಿರುವ ವರಿಗೆ ಬೇಕಾಗುವ ಅವಶ್ಯಕತೆಯನ್ನು ಗ್ರಹಿಸುವಷ್ಟು ಸಂವೇದನೆಗಳಿಸಬೇಕು, ಕಷ್ಟಕಾಲದಲ್ಲಿ ಸಹಾಯಮಾಡುವ ಮಾನವೀಯತೆ ಬೆಳೆಸಿಕೊಳ್ಳಬೇಕು ಎಂದು ರೋಟರಿ ಜಿಲ್ಲೆ 3182ರ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರು ಕರೆನೀಡಿದರು. ಅವರು ಡಿಸೆಂಬರ್ 16ರ ಮಂಗಳವಾರ ರೋಟರಿ ಐಸಿರಿಗೆ ನೀಡಿದ ಅಧಿಕೃತ ಭೇಟಿ ವೇಳೆ ನಡೆದ ವಿವಿಧ ಕಾರ್ಯಕ್ರಮಗಳ ಬಳಿಕದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.



ಅಂದು ಬೆಳಿಗ್ಗೆಯೇ ಪರ್ಕಳಕ್ಕೆ ಪತ್ನಿ–ರೋಟರಿ ಜಿಲ್ಲಾ ಪ್ರಥಮ ಮಹಿಳೆ ರೊ. ರೇಖಾ ಅವರೊಂದಿಗೆ ಆಗಮಿಸಿದ ರೊ. ಪಾಲಾಕ್ಷ ಅವರನ್ನು ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈಯವರ ಸುಮಂಗಲಾ ಪ್ರಾವಿಶನ್ ಸ್ಟೋರ್ಸ್ ಆವರಣದಲ್ಲಿ ಹೃತ್ಪೂರ್ವಕವಾಗಿ ಬರಮಾಡಿಕೊಳ್ಳಲಾಯಿತು.

ಹತ್ತು ಪೌರಕಾರ್ಮಿಕರು ಮತ್ತು ಮೇಲ್ವಿಚಾರಕರ ಸನ್ಮಾನ, ಶೆಟ್ಟಿಬೆಟ್ಟಿನ ಸರಕಾರಿ ಸಂಯುಕ್ತ ಪ್ರೌಢಶಾಲೆಯ ಹತ್ತನೇ ತರಗತಿಯ ಎಲ್ಲಾ 80ರಷ್ಟು ವಿದ್ಯಾರ್ಥಿಗಳಿಗೆ ಟೇಬಲ್ ಲ್ಯಾಂಪ್ ವಿತರಣೆ, ದಾನಿ ಶ್ರೀ ದಿನೇಶ್ ಕರ್ಕೇರರ ಸನ್ಮಾನ, ಐಶ್ವರ್ಯ ಸಾಪ್ತಾಹಿಕದ 24ನೇ ಸಂಚಿಕೆ ಬಿಡುಗಡೆ, ಭೈರಂಜೆ ಕ್ರಾಸ್ ನಲ್ಲಿ ಅಳವಡಿಸಿದ ರಸ್ತೆ ಸುರಕ್ಷತಾ ಕನ್ನಡಿಯ ಲೋಕಾರ್ಪಣೆ, ಐಸಿರಿ ಸಸ್ಯವನಕ್ಕೆ ಭೇಟಿ ನೀಡಿ, ಪ್ರಸ್ತುತ ಮತ್ತು ನಿಯೋಜಿಕ ಅಧ್ಯಕ್ಷ – ಕಾರ್ಯದರ್ಶಿಯವರೊಡನೆ ಆಪ್ತ ಮಾತುಕತೆ, ಕ್ಲಬ್ ಅಸೆಂಬ್ಲಿ ನಡೆಸಿದ ಬಳಿಕ ಸಾರ್ವಜನಿಕ ಸಭೆಯಲ್ಲಿ ಭಾಗಿಯಾದರು.

(ವಿಸ್ತೃತ ವರದಿ ಮುಂದಿನ ಪುಟಗಳಲ್ಲಿ)

## ಪಲ್ಸ್ ಪೋಲಿಯೋ: ಪರ್ಕಳದ ನಾಲ್ಕೂ ಕೇಂದ್ರಗಳಲ್ಲಿ ಕೈಜೋಡಿಸಿದ ರೋಟರಿ ಐಸಿರಿ

ಡಿಸೆಂಬರ್ 21, ಭಾನುವಾರ ಪರ್ಕಳ ಪರಿಸರದ ಎಲ್ಲಾ ನಾಲ್ಕು ಅಂಗನವಾಡಿ ಕೇಂದ್ರಗಳಲ್ಲಿ ನಡೆದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ರೋಟರಿ ಐಸಿರಿ ಸಹಯೋಗ ನೀಡಿತು. ಪರ್ಕಳ ಪಂಚಾಯತ್ ಆವರಣದ ಅಂಗನವಾಡಿಯಲ್ಲಿ ವಲಯದ ಪಲ್ಸ್ ಪೋಲಿಯೋ ಸಂಯೋಜಕ ರೊ. PHF. ಡಾ. ಪ್ರಭಾಕರ ಯು. ರೆಂಜಾಳ್ ದೀಪ ಬೆಳಗಿಸಿ ಉದ್ಘಾಟಿಸಿ, ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಬಳಿಕ ಶೆಟ್ಟಿಬೆಟ್ಟು, ಸರಳೇಬೆಟ್ಟು ಮತ್ತು ಬಿ.ಎಮ್. ಶಾಲೆ ಆವರಣದ ಅಂಗನವಾಡಿ ಕೇಂದ್ರಗಳಲ್ಲಿ ಒಟ್ಟು 601 ಮಕ್ಕಳಿಗೆ ಪೋಲಿಯೋ ಲಸಿಕೆ ಯನ್ನು ನೀಡಲಾಯಿತು. (ಮೂರನೇ ಪುಟಕ್ಕೆ)

## ರೋಟರಿ ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲೂ ಬಹುಮಾನಗಳಿಸಿದ ರೋಟರಿ ಐಸಿರಿ

ನವೆಂಬರ್ 29, 30ರ ವಲಯ ಕ್ರೀಡಾಕೂಟದಲ್ಲಿ ಹದಿನೆಂಟು ಬಹುಮಾನಗಳಿಸಿ, ಜಿಲ್ಲಾ ಮಟ್ಟಕ್ಕೆ ಅರ್ಹತೆ ಪಡೆದ ರೋಟರಿ ಐಸಿರಿ ಡಿಸೆಂಬರ್ 21ರಂದು ಶಿವಮೊಗ್ಗದಲ್ಲಿ ನಡೆದ ರೋಟರಿ 3182 ಜಿಲ್ಲಾ ಕ್ರೀಡಾಕೂಟದಲ್ಲೂ ನಮ್ಮ ವಲಯ ನಾಲ್ಕನ್ನು ಪ್ರತಿನಿಧಿಸಿದ ಐಸಿರಿಯ ಸದಸ್ಯೆ ರೊ. ಡಾ. ಸ್ವಾತಿ ಪೈಯವರು ಶಾಟ್ ಪುಟ್ ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಅನ್ನೆಟ್ಸ್ ವೃದ್ಧಿ ಭಟ್ ಮತ್ತು ವೇದಾ ಭಟ್ ಬ್ಯಾಡ್ಮಿಂಟನ್ (under 16) ಡಬಲ್ಸ್ ನಲ್ಲಿ ರನ್ನರ್ ಅಪ್ ಪ್ರಶಸ್ತಿಗಳಿಸಿ, ರೋಟರಿ ಜಿಲ್ಲಾಮಟ್ಟದಲ್ಲೂ ಐಸಿರಿಯ ಗೆಲುವಿನ ಪಯಣ ಮುಂದುವರೆಸಿದ್ದಾರೆ. ಅಭಿನಂದನೆಗಳು.



## ಕಾರ್ಯದರ್ಶಿಯವರ ವರದಿ

16/12/2025, ಮಂಗಳವಾರದಂದು ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರ ಅಧಿಕೃತ ಕ್ಲಬ್ ಭೇಟಿ ನಡೆಯಿತು.

ಬೆಳಗ್ಗೆ 11 ಗಂಟೆಗೆ ಸರಿಯಾಗಿ ಜಿಲ್ಲಾ ಗವರ್ನರ್ ಅವರನ್ನು ಪರ್ಕಳದ ಸುಮಂಗಲ ಸ್ಟೋರ್ಸ್ ಬಳಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ 10 ಜನ ಪೌರಕಾರ್ಮಿಕರನ್ನು ಗುರುತಿಸಿ ಗೌರವಿಸಲಾಯಿತು.

ಮುಂದೆ ಸರಕಾರಿ ಸಂಯುಕ್ತ ಪ್ರೌಢ ಶಾಲೆ ಶೆಟ್ಟಿಬೆಟ್ಟು ಇಲ್ಲಿನ 80 ವಿದ್ಯಾರ್ಥಿಗಳಿಗೆ ಟೇಬಲ್ ಲ್ಯಾಂಪ್ ಅನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ, ರೊ. ಪಾಲಾಕ್ಷ ಅವರು ಐಶ್ವರ್ಯ ಸಾಪ್ತಾಹಿಕದ 24ನೇ ಇ–ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

ಭೈರಂಜೆ ಕ್ರಾಸ್ ಬಳಿ ರೋಡ್ ಸೇಫ್ಟಿ ಪ್ರೋಗ್ರಾಂ ಆಗಿ ಒಂದು ಮಿರರ್ ಅಳವಡಿಸಲಾಯಿತು.

ಅಲ್ಲಿಂದ ಬಡಗುಬೆಟ್ಟು ಪರಿಸರದಲ್ಲಿ ರೊ. ಪ್ರಭಾಕರ್ ಶೆಟ್ಟಿ ಅವರು ನೀಡಿದ ಸ್ಥಳಾವಕಾಶದಲ್ಲಿ ಐಸಿರಿ ಸಸ್ಯವನ ಉದ್ಘಾಟಿಸಲಾಯಿತು.

ಈ ಎಲ್ಲ ಸಂದರ್ಭಗಳಲ್ಲಿ ಜಿಲ್ಲಾ ಗವರ್ನರ್ ಅವರು ಸಂಧರ್ಭೋಚಿತವಾಗಿ ಉಪಸ್ಥಿತರನ್ನು ಉದ್ದೇಶಿಸಿ ಮಾತನಾಡಿದರು. ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಹಾಗೂ ವಲಯ ಸೇನಾನಿ ರೊ. ಸ್ಮಿತಾ ಜಿ. ಕಾಮತ್ ಉಪಸ್ಥಿತರಿದ್ದರು

ಸಂಜೆ 5 ಗಂಟೆಗೆ ವೈಷ್ಣವಿ ಸಭಾ ಭವನದಲ್ಲಿ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಇವರು ಅಧ್ಯಕ್ಷ ರೊ. ಅನಿಲ್ ಕುಮಾರ್, ಕಾರ್ಯದರ್ಶಿ ರೊ. ಕೃಷ್ಣಪ್ಪ, ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಹಾಗೂ ನಿಯೋಜಿತ ಕಾರ್ಯದರ್ಶಿ ರೊ. ರಾಜೇಶ್ ಡಿ ಶೆಣೈ ಅವರೊಂದಿಗೆ ಕ್ಲೋಸ್ ಡೋರ್ ಮೀಟಿಂಗ್ ನಡೆಸಿದರು. ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಹಾಗೂ ವಲಯ ಸೇನಾನಿ ರೊ. ಸ್ಮಿತಾ ಜಿ ಕಾಮತ್ ಅವರ ಉಪಸ್ಥಿತಿಯಲ್ಲಿ ಈ ಸಭೆ ನಡೆಯಿತು.

ಸಂಜೆ 5.30ಕ್ಕೆ ರೋಟರಿ ಐಸಿರಿಯ 23 ಸದಸ್ಯರೊಂದಿಗೆ ಕ್ಲಬ್ ಅಸೆಂಬ್ಲಿ ನಡೆಸಲಾಯಿತು. DG ರೊ. ಪಾಲಾಕ್ಷ ಇವರು ಕ್ಲಬ್ ನ ಚಟುವಟಿಕೆಗಳ ಸಂಪೂರ್ಣ ಚಿತ್ರಣವನ್ನು ನಿರ್ದೇಶಕರಿಂದ ಪಡೆದರು. ಅಲ್ಲದೆ TRF ಹಾಗೂ membership ಬಗ್ಗೆ ಐಸಿರಿ ಇನ್ನು ಹೆಚ್ಚು ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಸಾಯಂಕಾಲದ ಕ್ಲಬ್ ಅಸೆಂಬ್ಲಿಯಲ್ಲಿ ಐಶ್ವರ್ಯ ಸಾಪ್ತಾಹಿಕದ ಎಲ್ಲಾ 24 ಸಂಚಿಕೆಗಳ ಸಂಕಲನದ ಮುದ್ರಿತ ಆವತ್ತಿಯನ್ನು ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಜಿಲ್ಲಾ ಗವರ್ನರ್ ಅವರಿಗೆ ಹಸ್ತಾಂತರಿಸಿದರು.

ಲಘು ಉಪಹಾರದ ನಂತರ 6.45ಕ್ಕೆ ಸಾರ್ವಜನಿಕ ಸಭಾ ಕಾರ್ಯಕ್ರಮ ಆರಂಭವಾಯಿತು. ದಂಡಪಾಣಿ ರೊ. ಕೊರಗಪ್ಪ ಶೆಟ್ಟಿಗಾರ್ ಅವರು ಅಧ್ಯಕ್ಷರಿಗೆ ಹಾಗೂ ಜಿಲ್ಲಾ ಗವರ್ನರ್ ಅವರಿಗೆ ಕಾಲರ್ ತೊಡಿಸಿ ಅಧ್ಯಕ್ಷರು ಸಭೆಯನ್ನು ಆರಂಭಿಸಿದರು.

ಆನ್ನೆಟ್ ಗಳಾದ ಶ್ರೇಯಾ, ದ್ವಿತಿ, ವೃದ್ಧಿ, ದಿಯಾ ಮತ್ತು ವೇದಾ ಇವರು ಪ್ರಾರ್ಥನೆ ನಡೆಸಿದರು.

ಅಧ್ಯಕ್ಷ ರೊ. ಅನಿಲ್ ಕುಮಾರ್ ಸಭೆಯನ್ನು ಸ್ವಾಗತಿಸಿ ತನ್ನ ಅನಿಸಿಕೆಗಳನ್ನು ಹಂಚಿಕೊಂಡರು.

ಕಾರ್ಯದರ್ಶಿ ರೊ. ಕೃಷ್ಣಪ್ಪ ಅವರು ಕಳೆದ 6 ತಿಂಗಳಲ್ಲಿ ಐಸಿರಿ ನಡೆಸಿದ ಕಾರ್ಯಕ್ರಮಗಳ ಬಗ್ಗೆ ವರದಿ ಮಂಡಿಸಿದರು.

ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಅವರನ್ನು ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಅವರು ಸಭೆಗೆ ಪರಿಚಯಿಸಿದರು.

PhD ಪದವಿ ಪಡೆದ ಆನ್ ರೂಪಶ್ರೀ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಇವರ ಸಾಧನೆಯನ್ನು Dr ಸ್ವಾತಿ ಪೈ ಅವರು ಸಭೆಗೆ ತಿಳಿಸಿಕೊಟ್ಟರು

ವಲಯ ಸೇನಾನಿ ರೊ. ಸ್ಮಿತಾ ಜಿ ಕಾಮತ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ ಐಸಿರಿಯ ಬೆಳವಣಿಗೆಯನ್ನು ಪ್ರಶಂಸಿಸಿದರು.

ಆಶಾ ಶೆಟ್ಟಿ, ಸುನಿಲ್ ಚಂದ್ರ ಹಾಗೂ ವೆಂಕಟೇಶ್ ಭಟ್ ಈ ಮೂವರನ್ನು ರೋಟರಿ ಐಸಿರಿಗೆ ಹೊಸ ಸದಸ್ಯರಾಗಿ ಸೇರ್ಪಡೆಗೊಳಿಸಲಾಯಿತು. ಇವರ ಪರಿಚಯವನ್ನು ಮೆಂಬರ್ಶಿಪ್ ಚೇರ್ಮನ್ ರೊ. ಗೀತಾಶ್ರೀ ಉಪಾಧ್ಯ ಮಾಡಿದರು. ಜಿಲ್ಲಾ ಗವರ್ನರ್ ಹಾಗೂ ಇತರ ಗಣ್ಯರು ಇವರಿಗೆ ಪಿನ್ ತೊಡಿಸಿ ಗೌರವಪೂರ್ವಕವಾಗಿ ಕ್ಲಬ್ ಗೆ ಬರಮಾಡಿಕೊಂಡರು

ಹಲವಾರು ವರ್ಷಗಳಿಂದ ಕೃಷಿ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿ ಕೊಂಡಿರುವ ನಾಗಪ್ಪ ಪೂಜಾರಿ ಮತ್ತು ಸುಂದರ ಪೂಜಾರಿ ಇವರನ್ನು ಜಿಲ್ಲಾ ಗವರ್ನರ್ ಅವರ ಸಮ್ಮುಖದಲ್ಲಿ ಗೌರವಿಸಲಾಯಿತು.

ಮೆದುಳು ಸಂಬಂಧಿತ ಅನಾರೋಗ್ಯದಿಂದ ಬಳಲುತ್ತಿರುವ ಶಶಿಕಲಾ ಶೆಟ್ಟಿ ಇವರ ಚಿಕಿತ್ಸೆಗಾಗಿ ರೋಟರಿ ಐಸಿರಿ ವತಿಯಿಂದ 50,000 ರೂಪಾಯಿ ಧನಸಹಾಯ ನೀಡಲಾಯಿತು.

ರೋಟರಿ ಐಸಿರಿ ಬುಲೆಟಿನ್ ಐಶ್ವರ್ಯದ DG ವಿಸಿಟ್ ವಿಶೇಷಾಂಕ ವನ್ನು ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಅವರು ನಡೆಸಿದರು. ಇದಕ್ಕೆ ಸಂಪಾದಕರಾದ ರೊ. ರಾಜೇಶ್ ಡಿ ಶೆಣೈ ಅವರು ಸಹಕರಿಸಿದರು. ಆಗಲೇ 5 ಬಾರಿ ವಿವಿಧ ಸಂದರ್ಭಗಳಲ್ಲಿ ಐಶ್ವರ್ಯವನ್ನು ಬಿಡುಗಡೆಗೊಳಿಸುವ ಅವಕಾಶ ದೊರೆತದ್ದನ್ನು AG ಸ್ಮರಿಸಿಕೊಂಡರು. ಅವರು ತಮ್ಮ ಮಾತಿನಲ್ಲಿ ಐಸಿರಿಯ ಈ ವರ್ಷದ ಕಾರ್ಯಸಾಧನೆಯನ್ನು ಪ್ರಶಂಸಿಸಿದರು.

ಪ್ರತಿಭಾನ್ವಿತ ವಿದ್ಯಾರ್ಥಿನಿ ತನ್ವಿ ಅವರಿಗೆ DG ಯವರು 5,000 ರೂಪಾಯಿ ಮೊತ್ತದ ಧನಸಹಾಯವನ್ನು ಹಸ್ತಾಂತರಿಸಿದರು.

ಸರಕಾರಿ ಮಾದರಿ ಕಿರಿಯ ಪ್ರಾಥಮಿಕ ಶಾಲೆ ಬಡಗುಬೆಟ್ಟು ಇವರಿಗೆ ಬಿಸಿ ಊಟದ ತಟ್ಟೆ ಇಡುವ ಸ್ಟೀಲ್ ಸ್ಟ್ಯಾಂಡ್ ಅನ್ನು ಹಸ್ತಾಂತರಿಸಲಾಯಿತು. ಈ ಕಾರ್ಯಕ್ರಮಕ್ಕೆ ಸಹಕರಿಸಿದ RCC ಐಸಿರಿಯ ಅಧ್ಯಕ್ಷರಾದ ಲಕ್ಷ್ಮೀ ಅವರು ಉಪಸ್ಥಿತರಿದ್ದರು. (ಮುಂದಿನ ಪುಟಕ್ಕೆ)

(ಹಿಂದಿನ ಪುಟದಿಂದ)

ಸುಮಾರು 1000 ಡಾಲರ್ ಗಳಷ್ಟು TRF ಮೊತ್ತವನ್ನು DG ಅವರಿಗೆ ಹಸ್ತಾಂತರಿಸಲಾಯಿತು. ಅಂತಾರಾಷ್ಟ್ರೀಯ ಸೇವಾ ನಿರ್ದೇಶಕರಾದ ರೊ. ಮಂಜುನಾಥ್ ಉಪಾಧ್ಯ ಅವರು ಸಹಕರಿಸಿದರು. TRF ಕೋರ್ಡಿನೇಟರ್ ರೊ. ಪಾಂಡುರಂಗ ಲಾಗ್ವಾಂಕರ್ ಹಾಗೂ ರೊ. ಸುದರ್ಶನ್ ಪೈ ಅವರು ಉಪಸ್ಥಿತರಿದ್ದರು.

ಮುಂದೆ ಜಿಲ್ಲಾ ಗವರ್ನರ್ ಅವರು ಮಾತನಾಡಿ ಐಸಿರಿಯ ಈ ವರ್ಷದ ಸಾಧನೆ ಮತ್ತು ಐಸಿರಿ ಕ್ಲಬ್ ಬೆಳೆಯುತ್ತಿರುವ ರೀತಿಯನ್ನು ಪ್ರಶಂಸಿಸಿದರು. ಜಿಲ್ಲೆಯಲ್ಲಿ ಉತ್ತಮ ಕ್ಲಬ್ ಎಂದು ರೋಟರಿ ಐಸಿರಿ ಗುರುತಿಸಿಕೊಳ್ಳುತ್ತಿದೆ ಎಂದರು. ಬೆಳಗಿನಿಂದ ನಡೆದ ಎಲ್ಲ ಕಾರ್ಯಕ್ರಮಗಳನ್ನು ಕೊಂಡಾಡಿದರು.

ಜಿಲ್ಲಾ ಗವರ್ನರ್ ರೊ. ಪಾಲಾಕ್ಷ, ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ್ ಹಾಗೂ ಜಿಲ್ಲೆಯ ಪ್ರಥಮ ಮಹಿಳೆ ರೊ. ರೇಖಾ ಅವರನ್ನು ಸ್ಮರಣಿಕೆ ನೀಡಿ ಗುರುತಿಸಲಾಯಿತು.

ಆಹ್ವಾನಿತ ಗಣ್ಯರ ಪಟ್ಟಿಯನ್ನು ರೊ. ಎ ಗಣೇಶ್ ವಾಚಿಸಿದರು. ವೇದಿಕೆಯ ಮೇಲಿನ ಗಣ್ಯರು ಅವರೆಲ್ಲರನ್ನು ಗುರುತಿಸಿದರು.

ಸಭೆಯ ಅದೃಷ್ಟಶಾಲಿ ವ್ಯಕ್ತಿಯನ್ನು ಜಿಲ್ಲಾ ಪ್ರಥಮ ಮಹಿಳೆ ರೊ. ರೇಖಾ ಪಾಲಾಕ್ಷ ಅವರು ಆಯ್ಕೆ ಮಾಡಿದರು. ರೋಟರಿ ಕ್ಲಬ್ ಉಡುಪಿಯ ಸದಸ್ಯರಾದ ರೊ. ದೀಪಾ ಭಂಡಾರಿ ಅವರು ಅದೃಷ್ಟಶಾಲಿಯಾಗಿ ಆಯ್ಕೆಯಾದರು.

ರೊ. ಗುರುಪ್ರಸಾದ್ ಕಾಮತ್ ಅವರು ಧನ್ಯವಾದ ಸಮರ್ಪಿಸಿದರು.

ಅಧ್ಯಕ್ಷರು ಸಭೆಯನ್ನು ಮುಂದೂಡಿದರು. ದಂಡಾಪಾಣಿ ಕೊರಳ ಲಾಂಛನ ತೆಗೆದರು. ರಾಷ್ಟ್ರಗೀತೆಯನ್ನು ಹಾಡಲಾಯಿತು.

ಸದಸ್ಯರ ಗ್ರೂಪ್ ಫೋಟೋ ನಂತರ ಸಹಭೋಜನ ನಡೆಯಿತು.

## ಪಲ್ಸ್ ಪೋಲಿಯೋ



21/12/2025 ಭಾನುವಾರ ಬೆಳಗ್ಗೆ 8 ಗಂಟೆಗೆ ಸರಿಯಾಗಿ ಪರ್ಕಳ ನಗರಸಭಾ ಉಪಕಛೇರಿಯ ಆವರಣದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ರೋಟರಿ ಜಿಲ್ಲೆ 3182, ವಲಯ 4ರ ಪಲ್ಸ್ ಪೋಲಿಯೋ ಕೋರ್ಡಿನೇಟರ್ ರೊ. PHF. Dr. ಪ್ರಭಾಕರ ಯು. ರೆಂಜಾಳ ಅವರು ದೀಪ ಬೆಳಗಿಸಿ ಉದ್ಘಾಟಿಸಿ, ಪೋಲಿಯೋ ಲಸಿಕೆಯ ಮಹತ್ವವನ್ನು ವಿವರಿಸಿದರು. ಅಧ್ಯಕ್ಷರು ಪೋಲಿಯೋ ನಿರ್ಮೂಲನೆಯ ಆಂದೋಲನದಲ್ಲಿ ರೋಟರಿಯ ಪಾತ್ರವನ್ನು ವಿವರಿಸಿದರು. ಕಾರ್ಯದರ್ಶಿ ರೊ ಕೃಷ್ಣಪ್ಪ ಅವರು ಧನ್ಯವಾದ ಸಮರ್ಪಿಸಿದರು. ಬಳಿಕ,



ರೊ. ಅನಿಲ್ ಕುಮಾರ್ ಮಗುವಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಚಾಲನೆ ನೀಡಿದರು. ಈ ಕೇಂದ್ರದಲ್ಲಿ ಒಟ್ಟು 172 ಮಕ್ಕಳಿಗೆ ಲಸಿಕೆ ನೀಡಲಾಯಿತು.



ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಹಾಯಕಿಯವರಾದ ಶ್ರೀಮತಿ ಹರಿಣಿ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಶಿಕ್ಷಕರು, ವಲಯ ಸೇನಾನಿ ರೊ. PHF. ಸ್ಮಿತಾ ಜಿ. ಕಾಮತ್, ಪೂರ್ವ ಸಹಾಯಕ ಗವರ್ನರ್ ರೊ. PHF. Dr. ಎ. ಗಣೇಶ, ಐಸಿರಿಯ ಸಮುದಾಯಸೇವಾ ನಿರ್ದೇಶಕರಾದ ರೊ. ಕೆ. ಪ್ರಕಾಶ್ ಶೆಣೈ, ಜಿಲ್ಲಾ RCC ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್, ಐಸಿರಿಯ ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಮತ್ತು ಫಲಾನುಭವಿಗಳು ಉಪಸ್ಥಿತರಿದ್ದರು.

## ಶೆಟ್ಟಿಬೆಟ್ಟು ಅಂಗನವಾಡಿ ಕೇಂದ್ರ



ಶೆಟ್ಟಿಬೆಟ್ಟು ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ರೋಟರಿ ಜಿಲ್ಲೆ 3182, ವಲಯ 4ರ ಪಲ್ಸ್ ಪೋಲಿಯೋ ಕೋರ್ಡಿನೇಟರ್ ರೊ. PHF. Dr. ಪ್ರಭಾಕರ ಯು. ರೆಂಜಾಳ ಅವರು ಮಗುವಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಚಾಲನೆ ನೀಡಿದರು.



ಈ ಕೇಂದ್ರದಲ್ಲಿ ಒಟ್ಟು 95 ಮಕ್ಕಳಿಗೆ ಲಸಿಕೆ ನೀಡಲಾಯಿತು.

ಬಳಿಕ, ಸರಳೇಬೆಟ್ಟು ಅಂಗನವಾಡಿ ಕೇಂದ್ರ ಮತ್ತು ಬಿ. ಎಮ್. ಶಾಲೆ ಆವರಣದ ಅಂಗನವಾಡಿ ಕೇಂದ್ರದತ್ತ ರೋಟರಿ ಐಸಿರಿ ತಂಡ ಮುಂದುವರೆಯಿತು.

## ಬೌದ್ಧಿಕ ಸಿರಿ

ವಿಜೇತರೂ ವಿನೀತರೂ!

ಅದೊಂದು ಹಲವಾರು ದೇಶಗಳಲ್ಲಿ ಸಂಚಲನ ಸೃಷ್ಟಿಸಿದ ಅಂತಾರಾಷ್ಟ್ರೀಯ ಪಂದ್ಯ. ಅಷ್ಟೊಂದು ಮಹತ್ವ ಪಡೆಯಲು ಕಾರಣ ಆ ಎರಡೂ ದೇಶಗಳ ನಡುವಿನ ಯುದ್ಧೋನ್ಮಾದದ ಸ್ಥಿತಿ. ಒಂದು ಸಂಖ್ಯಾಬಲದಲ್ಲಿ ಬಲಿಷ್ಠವಾಗಿರುವ ಶಾಂತಿಪ್ರಿಯ ರಾಷ್ಟ್ರವಾದರೆ ಮತ್ತೊಂದು ಶಾಂತಿಪ್ರಿಯ ದೇಶದ ಶಾಂತಿಗೆ ನಿರಂತರ ಭಂಗ ತರುತ್ತಾ, ಸದಾ ಒಂದಿಲ್ಲೊಂದು ಕ್ಷುಲ್ಲಕ ವಿಷಯವನ್ನೆತ್ತಿ ಕಾಲುಕೆರೆದು ಜಗಳಕ್ಕೆ ಬರುವ ಹುಂಬ ದೇಶ. ಎರಡು ಮೂರು ಯುದ್ಧಗಳಲ್ಲಿ ಮಣ್ಣುಮುಕ್ಕಿದರೂ "ಮೀಸೆ ಮಣ್ಣಾಗಿಲ್ಲ" ಎನ್ನುವಂತಹ ಭಂಡ ದೇಶ.

ದೈವೇಚ್ಛೆ, ಈ ಪಂದ್ಯಾಟದಲ್ಲೂ ಶಾಂತಿಪ್ರಿಯ ರಾಷ್ಟ್ರವೇ ಗೆದ್ದಿತು. ಅಪಾರ ಜನಬೆಂಬಲವಿರುವ ರಾಷ್ಟ್ರವಾದುದರಿಂದ ಸಾಂಪ್ರದಾಯಿಕ ಎದುರಾಳಿಯ ವಿರುದ್ಧ ಗೆಲುವಾದಾಗ ಸಂಭ್ರಮಾಚರಣೆಗೇನು ಕೊರತೆ ! ಸಂಭ್ರಮಾಚರಣೆಯು ವಿಷಮ ಸ್ಥಿತಿಗೆ ಹೋಗುವ ಆತಂಕ ಎಲ್ಲೆಡೆ.

ಆದರೆ, ಪಂದ್ಯದ ಬಳಿಕ ವಿಜೇತ ತಂಡದ ನಾಯಕ ಆಡಿದ ಈ ಕೆಳಗಿನ ಮಾತುಗಳು ಸಂಪೂರ್ಣ ಪರಿಸ್ಥಿತಿಯನ್ನೇ ಬದಲಾಯಿಸಿಬಿಟ್ಟಿತು. ಆತನ ವಿವೇಕಯುತ ಮಾತುಗಳು ತನ್ನ ದೇಶದ ಘನತೆಗೆ ತಕ್ಕುದಾಗಿತ್ತು.

"ನಾವು ಗೆಲುವಿನ ಸಂತಸದಲ್ಲಿದ್ದೇವೆ. ಹೌದು, ನಾವು ವಿಜೇತರು. ಆದರೆ ಗೆಲುವು ಎಂದರೆ ಕೇವಲ ಪ್ರಶಸ್ತಿ, ಪದವಿ ಅಥವಾ ಸಾಧನೆ ಅಲ್ಲ. ಗೆಲುವಿನ ನಿಜವಾದ ಅರ್ಥ ನಮ್ಮ ನಡೆ–ನುಡಿ ಮತ್ತು ಸ್ವಭಾವದಲ್ಲಿ ಅಡಗಿದೆ. ನಿಜವಾದ ವಿಜೇತರು ಎಂದರೆ ಯಾರು? ತಮ್ಮ ಯಶಸ್ಸಿನ ಶಿಖರದಲ್ಲಿ ನಿಂತು ಸಹ ವಿನೀತರಾಗಿ ಯೋಚಿಸುವವರು. ತಮ್ಮ ಸಾಧನೆಗೆ ತಾವೇ ಕಾರಣವೆಂದು ಹೆಮ್ಮೆಪಡುವುದಕ್ಕಿಂತ, ತಂಡದ ಶ್ರಮ, ಮಾರ್ಗದರ್ಶನ ಮತ್ತು ಸಮಾಜದ ಬೆಂಬಲವನ್ನು ಗೌರವಿಸುವವರು.

ವಿನಯವೆಂದರೆ ದುರ್ಬಲತೆ ಅಲ್ಲ. ವಿನಯವೇ ಶಕ್ತಿ. ವಿನಯವೇ ನಾಯಕತ್ವದ ಗುರುತು. ಅಹಂಕಾರ ಕ್ಷಣಿಕ ಜಯ ಕೊಡಬಹುದು, ಆದರೆ ವಿನಯ ಶಾಶ್ವತ ಗೌರವ ತರುತ್ತದೆ. ನಾವು ಗೆದ್ದಿದ್ದೇವೆ ಎಂಬುದು ನಮ್ಮ ಸಾಧನೆ. ಆದರೆ ನಾವು ವಿನಯದಿಂದ ಉಳಿಯುವುದು ನಮ್ಮ ಸಂಸ್ಕೃತಿ. ನಮ್ಮ ನಡೆನುಡಿ ಇತರರಿಗೆ ಪ್ರೇರಣೆಯಾಗಲಿ, ನಮ್ಮ ಯಶಸ್ಸು ಇನ್ನೊಬ್ಬರ ಆಶೆಯಾಗಲಿ. ಆದ್ದರಿಂದ ಸ್ನೇಹಿತರೇ, ವಿಜಯ ನಮ್ಮದಾಗಿರಲಿ, ವಿನಯ ನಮ್ಮ ಗುರುತಾಗಿರಲಿ. ಇದೇ ನಿಜವಾದ ಗೆಲುವು. ಧನ್ಯವಾದಗಳು."

**ಸಂಕಲನ : ರೊ. ರಾಜೇಶ್ ಡಿ. ಶೆಣೈ**

## ಸರಳೇಬೆಟ್ಟು ಅಂಗನವಾಡಿ ಕೇಂದ್ರ





ಸರಳೇಬೆಟ್ಟು ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ರೋಟರಿ ಜಿಲ್ಲೆ 3182, ವಲಯ ಸೇನಾನಿ ರೊ. PHF. ಸ್ಮಿತಾ ಜಿ. ಕಾಮತ್ ಅವರು ಮಗುವಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಚಾಲನೆ ನೀಡಿದರು. ಈ ಕೇಂದ್ರದಲ್ಲಿ ಒಟ್ಟು 168 ಮಕ್ಕಳಿಗೆ ಲಸಿಕೆ ನೀಡಲಾಯಿತು.

## ಬಿ. ಎಮ್. ಶಾಲೆ ಆವರಣದ ಅಂಗನವಾಡಿ ಕೇಂದ್ರ





ಬಿ. ಎಮ್. ಶಾಲೆ ಆವರಣದ ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ರೋಟರಿ ಜಿಲ್ಲೆ 3182 ಆರ್.ಸಿ.ಸಿ. ಉಪಸಭಾಪತಿ ರೊ. PHF. ಗುರುಪ್ರಸಾದ್ ಕಾಮತ್ ಅವರು ಮಗುವಿಗೆ ಪೋಲಿಯೋ ಲಸಿಕೆ ನೀಡುವ ಮೂಲಕ ಚಾಲನೆ ನೀಡಿದರು. ಈ ಕೇಂದ್ರದಲ್ಲಿ ಒಟ್ಟು 166 ಮಕ್ಕಳಿಗೆ ಲಸಿಕೆ ನೀಡಲಾಯಿತು.

## ಡಿಸ್ಟ್ರಿಕ್ಟ್ ಸ್ಪೋರ್ಟ್ಸ್





ಶಿವಮೊಗ್ಗದಲ್ಲಿ ನಡೆದ ರೋಟರಿ ಜಿಲ್ಲಾ ಕ್ರೀಡಾಕೂಟದಲ್ಲಿ ಶಾಟ್ ಪುಟ್ ಎಸೆತ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ರೊ. ಡಾ. ಸ್ವಾತಿ ಪೈ ಮತ್ತು under 16 ಬ್ಯಾಡ್ಮಿಂಟನ್ ಡಬಲ್ಸ್ ನಲ್ಲಿ ರನ್ನರ್ ಅಪ್ ಪ್ರಶಸ್ತಿಗಳಿಸಿದ ಅನ್ನೆಟ್ಸ್ ವೃದ್ಧಿ ಭಟ್ ಮತ್ತು ವೇದಾ ಭಟ್.



## DG ಯವರಿಂದ "ಐಶ್ವರ್ಯ" 24ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕದ ಇಪ್ಪತ್ತನಾಲ್ಕನೇ ಸಂಚಿಕೆಯನ್ನು ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರು 16/12/2025ರಂದು ಶೆಟ್ಟಿಬೆಟ್ಟು ಶಾಲಾ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಿದರು.

## AG ಯವರಿಂದ "ಐಶ್ವರ್ಯ" ವಿಶೇಷ ಸಂಚಿಕೆ ಬಿಡುಗಡೆ




ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ ಗೃಹಪತ್ರಿಕೆ "ಐಶ್ವರ್ಯ" ದ ಜಿಲ್ಲಾ ಗವರ್ನರ್ ಭೇಟಿಯ ವಿಶೇಷ ಸಂಚಿಕೆಯನ್ನು ವಲಯ 4ರ ಸಹಾಯಕ ಗವರ್ನರ್ ರೊ. ಅಮಿತ್ ಅರವಿಂದ ಅವರು 16/12/2025ರಂದು ಸಂಜೆ ಸಾರ್ವಜನಿಕ ಸಭೆಯಲ್ಲಿ ಬಿಡುಗಡೆಗೊಳಿಸಿದರು.






ಕಾಪು ಶಾಸಕರಾದ ಶ್ರೀ ಸುರೇಶ್ ಶೆಟ್ಟಿ ಗುರ್ಮೆಯವರು ಉಪಸ್ಥಿತರಿದ್ದ, ರೋಟರಿ ಸಮುದಾಯದಳ ಇನ್ನಂಜೆ ಕೊಡಮಾಡಿದ ಮನೆ "ಕುಶಲ ನಿವಾಸ"ದ ಹಸ್ತಾಂತರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್ ಅವರು ಭಾಗವಹಿಸಿ ಮಾತನಾಡಿದರು.

## ಐಶ್ವರ್ಯ 1 ರಿಂದ 24 ಮುದ್ರಿತ ಆವೃತ್ತಿ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿ "ಐಶ್ವರ್ಯ" ಸಾಪ್ತಾಹಿಕದ ಪ್ರಥಮಾರ್ಧದ ಇಪ್ಪತ್ತನಾಲ್ಕೂ ಸಂಚಿಕೆಗಳ ವರ್ಣರಂಜಿತ ಮುದ್ರಿತ ಆವೃತ್ತಿಯನ್ನು ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರಿಗೆ 16/12/2025ರಂದು ಕ್ಲಬ್ ಅಸೆಂಬ್ಲಿಯಲ್ಲಿ ನೀಡಲಾಯಿತು.



ರೋಟರಿ ಐಸಿರಿಗೆ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರ ಅಧಿಕೃತ ಭೇಟಿ ವೇಳೆ ನಡೆದ ಸಾರ್ವಜನಿಕ ಸಭೆಯ ಅದೃಷ್ಟಶಾಲಿ ರೋಟೇರಿಯನ್ ಆಯ್ಕೆಯನ್ನು ರೋಟರಿ ಜಿಲ್ಲಾ ಪ್ರಥಮ ಮಹಿಳೆ ರೊ. ರೇಖಾ ನಡೆಸಿ, ರೊ. ದೀಪಾ ಭಂಡಾರಿ ಅದೃಷ್ಟಶಾಲಿಯಾಗಿ ಆಯ್ಕೆಯಾದರು.



ಈ ಬಾರಿಯ ಜಿಲ್ಲಾ ಗವರ್ನರ್ ಅಧಿಕೃತ ಭೇಟಿಯ ದಿನವೇ ನಮ್ಮ ಅಧ್ಯಕ್ಷರ ಜನ್ಮದಿನವೂ ಆದುದರಿಂದ ರೊ. ಪಾಲಾಕ್ಷ ಕೆ. ಅವರು ರೊ. ಅನಿಲ್ ಕುಮಾರ್ ಅವರಿಗೆ ಹೂ ಗುಚ್ಛವನ್ನು ನೀಡಿ ಹುಟ್ಟುಹಬ್ಬದ ಶುಭಾಶಯ ಸಲ್ಲಿಸಿದರು.

# ರೋಟರಿ ಐಸಿರಿಗೆ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅಧಿಕೃತ ಭೇಟಿ – ಚಿತ್ರ ಸಂಚಯ



ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ ಮಾಲೀಕತ್ವದ ಸುಮಂಗಲಾ ಪ್ರಾವಿಷನ್ ಸ್ಟೋರ್ಸ್ ಬಳಿ ಗವರ್ನರ್ ದಂಪತಿಯರನ್ನು ಆತ್ಮೀಯವಾಗಿ ಬರಮಾಡಿಕೊಂಡಾಗ



ಪರ್ಕಳ ಪರಿಸರದಲ್ಲಿ ನಿಯುಕ್ತಿಗೊಂಡಿರುವ ಹತ್ತುಮಂದಿ ಪೌರಕಾರ್ಮಿಕರ ಮತ್ತು ಮೇಲ್ವಿಚಾರಕರ ಸನ್ಮಾನ, ದಿನಬಳಕೆಯ ವಸ್ತುಗಳ ಕೊಡುಗೆ – ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ ಪ್ರಾಯೋಜಿತ



ಶೆಟ್ಟಿಬೆಟ್ಟಿನ ಸರಕಾರಿ ಸಂಯುಕ್ತ ಪ್ರೌಢಶಾಲೆಯ ಹತ್ತನೇ ತರಗತಿಯ ಎಲ್ಲಾ 80ರಷ್ಟು ವಿದ್ಯಾರ್ಥಿಗಳಿಗೆ ಟೇಬಲ್ ಲ್ಯಾಂಪ್ ವಿತರಣೆ



ಟೇಬಲ್ ಲ್ಯಾಂಪ್ ಪಡೆಯುತ್ತಿರುವ ವಿದ್ಯಾರ್ಥಿನಿಯರು. ವ್ಯವಸ್ಥಾಪನೆ ಸಮುದಾಯಸೇವಾ ನಿರ್ದೇಶಕ ರೊ. ಕೆ. ಪ್ರಕಾಶ್ ಶೆಣೈ



ರೊ. ಕೆ. ಪ್ರಕಾಶ್ ಶೆಣೈಯವರ ಉಪಕ್ರಮದಂತೆ ಟೇಬಲ್ ಲ್ಯಾಂಪ್ ಗಳನ್ನು ಪ್ರಾಯೋಜಿಸಿದ ಸ್ಥಳೀಯ ಉದ್ಯಮಿ ಶ್ರೀ ದಿನೇಶ್ ಕರ್ಕೇರ ಅವರಿಗೆ ರೋಟರಿ ಐಸಿರಿಯಿಂದ ಗೌರವಾರ್ಪಣೆ



ತನ್ನದೇ ಸ್ವಂತ ಶಾಲೆ ಎಂಬಂತೆ ಶೆಟ್ಟಿಬೆಟ್ಟು ಸರಕಾರಿ ಸಂಯುಕ್ತ ಪ್ರೌಢಶಾಲೆಗೆ ಸೌಲಭ್ಯಗಳನ್ನು ಒದಗಿಸಿಕೊಡುತ್ತಿರುವ ರೊ. ಪ್ರಕಾಶ್ ಶೆಣೈಯವರನ್ನೂ, ದಾನಿ ಶ್ರೀ ದಿನೇಶ್ ಕರ್ಕೇರಾರನ್ನೂ, ರೋಟರಿ ಐಸಿರಿಯನ್ನೂ ಶ್ಲಾಘಿಸಿದ DG





ಭೈರಂಜೆ ಕ್ರಾಸ್ ನಲ್ಲಿ ರೋಡ್ ಸೇಫ್ಟಿ
ಕಾರ್ಯಕ್ರಮದ ಅಂಗವಾಗಿ ಕನ್ನಡಿಯನ್ನು ಲೋಕಾರ್ಪಣೆ ಮಾಡಿದಾಗ

# ರೋಟರಿ ಐಸಿರಿಗೆ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅಧಿಕೃತ ಭೇಟಿ – ಚಿತ್ರ ಸಂಚಯ




ರೊ. ಪ್ರಭಾಕರ್ ಶೆಟ್ಟಿ ಅವರು ನೀಡಿದ ಸ್ಥಳಾವಕಾಶದಲ್ಲಿ
ಐಸಿರಿ ಸಸ್ಯವನ ಉದ್ಘಾಟಿಸಲಾಯಿತು.



ಹಳ್ಳಿ ಸೊಗಡಿನ ಈ ರೀತಿಯ ಉದ್ಘಾಟನೆಯನ್ನು
ರೊ. ಪಾಲಾಕ್ಷ ಅವರು ಬಹುವಾಗಿ ಮೆಚ್ಚಿಕೊಂಡರು.



ಆರ್.ಸಿ.ಸಿ. ಐಸಿರಿಯ ಸದಸ್ಯರು ನಿರ್ವಹಿಸಿದ ಈ ಕಾರ್ಯಕ್ರಮವನ್ನು
ಸಂಪೂರ್ಣವಾಗಿ ದೇಸಿ ಶೈಲಿಯಲ್ಲಿ ಸಜ್ಜುಗೊಳಿಸಿದ್ದು
ಪ್ರಶಂಸೆಗೆ ಪಾತ್ರವಾಯಿತು.



ನಮ್ಮ ನಡೆ ಕೃಷಿಯ ಕಡೆ ಎನ್ನುವ ಧ್ಯೇಯಕ್ಕನುಗುವಾಗಿ ಕೃಷಿಕರಾದ
ಶ್ರೀ ನಾಗಪ್ಪ ಪೂಜಾರಿ ಮತ್ತು ಶ್ರೀ ಸುಂದರ ಪೂಜಾರಿಯರವನ್ನು
ಸಾರ್ವಜನಿಕ ಸಭೆಯಲ್ಲಿ ಸನ್ಮಾನಿಸಲಾಯಿತು.



ಸಂಘಸೇವಾ ನಿರ್ದೇಶಕ ರೊ. ಸುನಿಲ್ ಕುಮಾರ್ ರವರ ಪತ್ನಿ
ಡಾ. ರೂಪಶ್ರೀ ಶೆಟ್ಟಿಯವರನ್ನು ಪಿ. ಹೆಚ್. ಡಿ. ಸಾಧನೆಗಾಗಿ ಸನ್ಮಾನಿಸಲಾಯಿತು



ಪ್ರತಿಭಾನ್ವಿತ ವಿದ್ಯಾರ್ಥಿನಿ ಕುಮಾರಿ ತನ್ವಿ ಅವರಿಗೆ
ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅವರ ಮೂಲಕ ರೂ. 5,000.00
ವಿದ್ಯಾರ್ಥಿವೇತನವನ್ನು ನೀಡಲಾಯಿತು. ರೊ. ನಾಗರಾಜ ನಾಯಕ್,
ಸಂಘಸೇವಾ ನಿರ್ದೇಶಕ ರೊ. ಸುನಿಲ್ ಕುಮಾರ್ ಉಪಸ್ಥಿತರಿದ್ದರು.



# ರೋಟರಿ ಐಸಿರಿಗೆ ಜಿಲ್ಲಾ ಗವರ್ನರ್ ರೊ. ಪಾಲಾಕ್ಷ ಕೆ. ಅಧಿಕೃತ ಭೇಟಿ – ಚಿತ್ರ ಸಂಚಯ




ರೋಟರಿಗೆ ಐಸಿರಿಗೆ ಮೂವರು ಹೊಸ ಸದಸ್ಯರು ಸೇರ್ಪಡೆಗೊಂಡಾಗ ಕ್ರಮವಾಗಿ ರೊ. ಆಶಾ ಮನೋಜ್ ಶೆಟ್ಟಿ, ರೊ. ಸುನೀಲ್ ಚಂದ್ರ ಮತ್ತು ರೊ. ವೆಂಕಟೇಶ ಭಟ್ ಕೆ. ಎಮ್.



ಸರಕಾರಿ ಮಾದರಿ ಕಿರಿಯ ಪ್ರಾಥಮಿಕ ಶಾಲೆ, ಬಡಗುಬೆಟ್ಟು ಇಲ್ಲಿಗೆ ಬಿಸಿಯೂಟದ ತಟ್ಟೆ ಇಡುವ ಸ್ಟೀಲ್ ಸ್ಟಾಂಡ್ ಅನ್ನು ಹಸ್ತಾಂತರಿಸಲಾಯಿತು. ಆರ್.ಸಿ.ಸಿ. ಐಸಿರಿಯ ಅಧ್ಯಕ್ಷರಾದ ಲಕ್ಷ್ಮೀ ಅವರು ವೇದಿಕೆಯಲ್ಲಿ.



ಶ್ರೀಮತಿ ಶಶಿಕಲಾ ಶೆಟ್ಟಿ ಇವರ ಮೆದುಳು ಸಂಬಂಧಿತ ಚಿಕಿತ್ಸೆಗಾಗಿ ರೋಟರಿ ಐಸಿರಿ ವತಿಯಿಂದ 50,000.00 ರೂಪಾಯಿ ಧನಸಹಾಯ ನೀಡಲಾಯಿತು. ರೊ. ಅಶೋಕ ಕುಮಾರ್ ಮತ್ತು ರೊ. ಪ್ರಕಾಶ್ ಶೆಣೈಯವರ ಉಪಸ್ಥಿತಿ.



TRF ಗೆ ನೀಡುವ ಸುಮಾರು 1,000 ಡಾಲರ್ ಗಳಷ್ಟು ಮೊತ್ತವನ್ನು DG ಅವರಿಗೆ ಹಸ್ತಾಂತರಿಸಲಾಯಿತು. ಅಂತಾರಾಷ್ಟ್ರೀಯಸೇವಾ ನಿರ್ದೇಶಕರಾದ ರೊ. ಮಂಜುನಾಥ್ ಉಪಾಧ್ಯ, TRF ಕೋರ್ಡಿನೇಟರ್ ರೊ. ಪಾಂಡುರಂಗ ಲಾಗ್ವಾನ್‌ಕರ್, ರೊ. ಸುದರ್ಶನ್ ಪೈ ಅವರು ಉಪಸ್ಥಿತರಿದ್ದರು.

